# ಹಕ್ಕಿ, ಮಗು, ಮನುಷ್ಯ

ಬೆಳಗ್ಗೆ ಬೆಳಗ್ಗೆ
ಸೂರ್ಯ ಮೂಡದ ಸಮಯ
ಎರಡು ಹಕ್ಕಿಗಳು
ಹಾರುತ್ತಿದ್ದೆವು
ಆಕಾಶದತ್ತ ಮುಖ ಚಾಚಿ

ಕೆಳಗೆ ಇಳಿಯುತ್ತ
ಮೇಲಕ್ಕೆ ನೆಗೆಯುತ್ತ
ಆಟ ಆಡಿದರೂ
ಇತ್ತು ಬುವಿಯ ನೆರಳು
ಅವುಗಳ ಕಣ್ಣಂಚಿನಲಿ

ಯಾರು
ಎಷ್ಟೇ ಎತ್ತರಕ್ಕೇರಿದರೂ
ಇಳಿಯಬೇಕಲ್ಲವೇ
ಬುವಿಯ ಮೇಲೆ

ಕಾಂಕ್ರೀಟ್ ಕಾಡಿನಲಿ
ಪುಟ್ಟ ಗುಡಿಸಲಿನಂಗಳದಲಿ
ಪುಟ್ಟ ಮಗುವೊಂದು
ಬೆರಗಿನಲಿ ನಿಂತು ನೋಡುತ್ತಿತ್ತು
ಈ ದೃಶ್ಯವನು ವಿಸ್ಮಯದಲಿ


ಕಣ್ಮುಚ್ಚಿದೆ
ಒಂದು ಕ್ಷಣ
ಮಗು, ಹಕ್ಕಿ, ಮನುಷ್ಯ
ತೇಲಿ, ತೇಲಿ ಬಂದರು ಮೋಡದಂತೆ

ಮಗುವಿನ ದೃಷ್ಟಿ ಹಕ್ಕಿಗಳತ್ತ
ಹಕ್ಕಿಗಳ ಹಾರಾಟ ಆಕಾಶದತ್ತ
ಮನುಷ್ಯನ ಚಿತ್ತ
ಗಡಿ ಸೀಮೆಗಳ ಸುತ್ತ
ನನ್ನ ಮುಖ ನೆಲದತ್ತ

ಇವರಲಿ
ಯಾರು ? ಮತಾಂಧ, ಧರ್ಮಾಂಧ
ಯಾರು ? ಆತಂಕವಾದಿ, ಭಯೋತ್ಪಾದಕ
ಯಾರು ? ನರಹಂತಕ, ಪ್ರಳಾಯಾಂತಕ
ಒಡೆಯದ ಒಗಟು
ಒಂದೂ ತಿಳಿಯಲಿಲ್ಲ
ಆ ಗಳಿಗೆ

ನೆಲದ ಮೆಲೆ ಜನಸಾಗರ
ಭಾವ ಸಮುದ್ರ.

● ಸತ್ಯಾನಂದ ಪಾತ್ರೋಟ



ವಾಗೀಶ ಹೆಗಡೆ